ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-6, May – June 2026, Pp. 80-86
©*IIMRD*, Mysuru
www.iimrd.com

# ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ವೃತ್ತ ಪತ್ರಿಕೆಗಳ ಪಾತ್ರ : ಒಂದು ಅಧ್ಯಯನ

**ವಿಜಯ ಎಂ[1] ಮತ್ತು ಡಾ.ರಾಮೇಗೌಡ, ಸಿ[2]**
[1]ಸಂಶೋಧನಾ ವಿದ್ಯಾರ್ಥಿ., [2]ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ. ಮೈಸೂರು.

**ಸಾರಾಂಶ: (Abstract)**

*ಕರ್ನಾಟಕ ರಾಜ್ಯದ ಏಕೀಕರಣವು ನಾಡಿನ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಜನರ ಆಸ್ಮಿತೆಯನ್ನು ಕಾಪಾಡುವ ಉದ್ದೇಶದಿಂದ ನಡೆದ ಕರ್ನಾಟಕ ಏಕೀಕರಣ ಚಳುವಳಿಯು ದೀರ್ಘಕಾಲ ಹೋರಾಟದ ಫಲವಾಗಿದೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟಗಳಲ್ಲಿ ಕನ್ನಡ ಭಾಷಿಕರು ಮೈಸೂರು ಸಂಸ್ಥಾನ, ಮದ್ರಾಸ್ ಪ್ರಾಂತ್ಯ, ಮುಂಬೈ ಪ್ರಾಂತ್ಯ, ಹೈದರಬಾದ್ ಸಂಸ್ಥಾನ ಮತ್ತು ಕೂರ್ಗ್ ಪ್ರದೇಶಗಳಲ್ಲಿ ಹರಡಿಕೊಂಡಿದ್ದರು. ಈ ವಿಭಜನೆಯಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅನೇಕ ಅಡೆತಡೆಗಳು ಉಂಟಾಗಿದ್ದವು. ಇಂತಹ ಸಂದರ್ಭದಲ್ಲಿ ಕನ್ನಡಿಗರನ್ನು ಒಗ್ಗೂಡಿಸಿ ಏಕೀಕೃತ ಕರ್ನಾಟಕ ರಾಜ್ಯದ ನಿರ್ಮಾಣಕ್ಕಾಗಿ ನಡೆದ ಹೋರಾಟವೇ ಕರ್ನಾಟಕ ಏಕೀಕರಣ ಚಳುವಳಿ. ಏಕೀಕರಣ ಚಳುವಳಿಯ ಯಶಸ್ವಿನಲ್ಲಿ ಅನೇಕ ಸಂಘಟನೆಗಳು, ನಾಯಕರು, ಸಾಹಿತಿಗಳು ಹಾಗೂ ಪತ್ರಿಕೆಗಳು ಮಹತ್ವದ ಪಾತ್ರವನ್ನು ವಹಿಸಿದವು. ವಿಶೇಷವಾಗಿ ಪತ್ರಿಕೆಗಳು ಜನರಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಪ್ರಮುಖ ಸಾಧನಗಳಾಗಿದ್ದವು. ಆ ಕಾಲದಲ್ಲಿ ಇಂದಿನಂತೆ ದೂರದರ್ಶನ, ಅಂತರ್ಜಾಲ ಅಥವಾ ಸಾಮಾಜಿಕ ಮಾಧ್ಯಮಗಳ ಸೌಲಭ್ಯಗಳಿರಲಿಲ್ಲ. ಆದ್ದರಿಂದ ಪತ್ರಿಕೆಗಳು ಜನಸಂಪರ್ಕದ ಪ್ರಮುಖ ಮಾಧ್ಯಮವಾಗಿ ಕಾರ್ಯನಿರ್ವಹಿಸಿದವು. ಜನರಿಗೆ ಮಾಹಿತಿ ನೀಡುವುದು, ಅಭಿಪ್ರಾಯ ರೂಪಿಸುವುದು, ಸಾರ್ವಜನಿಕ ಚರ್ಚೆಗಳನ್ನು ಹುಟ್ಟು ಹಾಕುವುದು ಹಾಗೂ ಜನರನ್ನು ಹೋರಾಟದತ್ತ ಪ್ರೇರೇಪಿಸುವ ಕಾರ್ಯವನ್ನು ಪತ್ರಿಕೆಗಳು ಪರಿಣಾಮಕಾರಿಯಾಗಿ ನಿರ್ವಹಿಸಿದವು.*

**ಮುಖ್ಯಪದಗಳು (Keywords):** *ಕರ್ನಾಟಕ, ಏಕೀಕರಣ, ಪತ್ರಿಕೆಗಳು, ಬಾಂಬೆ, ಮದ್ರಾಸ್, ಮೈಸೂರು, ಮಂಗಳೂರು ಸಮಾಚಾರ, ವಿಜಯ ಕರ್ನಾಟಕ*

## ಪೀಠಿಕೆ

ಕನ್ನಡ ಪತ್ರಿಕೆಗಳು ಕನ್ನಡಿಗರಲ್ಲಿ ಭಾಷೆ ಪ್ರೇಮ, ಸಾಂಸ್ಕೃತಿಕ ಪ್ರಜ್ಞೆ ಹಾಗೂ ಏಕೀಕರಣದ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸಿದವು. ಕನ್ನಡ ಭಾಷಿಕರು ವಿವಿಧ ಆಡಳಿತ ಪ್ರದೇಶಗಳಲ್ಲಿ ಎದುರಿಸುತ್ತಿದ್ದ

*Please cite this article as:* ವಿಜಯ, ಎಂ ಮತ್ತು ರಾಮೇಗೌಡ, ಸಿ. (2026). ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ವೃತ್ತ ಪತ್ರಿಕೆಗಳ ಪಾತ್ರ : ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(6). ಪು.ಸಂ.* 80–86

ಸಮಸ್ಯೆಗಳನ್ನು ಬೆಳಕಿಗೆ ತರುವ ಮೂಲಕ ಪತ್ರಿಕೆಗಳು ಜನಾಭಿಪ್ರಾಯವನ್ನು ರೂಪಿಸಿದವು. ವಿವಿಧ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದ ಕನ್ನಡಿಗರ ಸ್ಥಿತಿಗಳನ್ನು ವಿವರಿಸುವ ಲೇಖನಗಳು, ಸಂಪಾದಕೀಯಗಳು ಹಾಗೂ ವಿಶೇಷ ವರದಿಗಳ ಮೂಲಕ ಪತ್ರಿಕೆಗಳು ಕನ್ನಡಿಗರಿಗೆ ಏಕತೆಯ ಭಾವನೆಯನ್ನು ಬಲಪಡಿಸಿದವು. ಈ ಮೂಲಕ ಪತ್ರಿಕೆಗಳು ಏಕೀಕರಣ ಚಳುವಳಿಯ ಪ್ರಮುಖ ಪ್ರಚಾರ ಮಾಧ್ಯಮಗಳಾಗಿ ಕಾರ್ಯನಿರ್ವಹಿಸಿದವು. ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಹಲವಾರು ಕನ್ನಡ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಜನಜಾಗೃತಿಯ ಕಾರ್ಯವನ್ನು ಕೈಗೊಂಡವು. ಅವುಗಳಲ್ಲಿ 'ಜಯಕರ್ನಾಟಕ, ಕರ್ಮವೀರ, ಪ್ರಜಾಮತ, ವಿಶ್ವ ಕರ್ನಾಟಕ, ಉದಯವಾಣಿ, ಸಂಯುಕ್ತ ಕರ್ನಾಟಕ' ಮುಂತಾದ ಪತ್ರಿಕೆಗಳು ಗಮನಾರ್ಹವಾಗಿವೆ. ಈ ಪತ್ರಿಕೆಗಳು ಕನ್ನಡಿಗರ ಆಶಯಗಳನ್ನು ಒಂದೇ ಆಡಳಿತ ಘಟಕದ ಅಡಿಯಲ್ಲಿ ತರಬೇಕೆಂಬ ಬೇಡಿಕೆಯನ್ನು ನಿರಂತರವಾಗಿ ಪ್ರಕಟಿಸುವ ಮೂಲಕ ಸಾರ್ವಜನಿಕ ಬೆಂಬಲವನ್ನುಗಳಿಸಲು ಸಹಕರಿಸಿದವು. ಪತ್ರಿಕೆಗಳ ಸಂಪಾದಕೀಯಗಳು ಏಕೀಕರಣ ಚಳುವಳಿಯ ವಿಚಾರಧಾರೆಯನ್ನು ಜನರಿಗೆ ತಲುಪಿಸುವಲ್ಲಿ ವಿಶೇಷ ಪಾತ್ರವಹಿಸಿದವು. ಸಂಪಾದಕರು ಮತ್ತು ಲೇಖಕರು ತಮ್ಮ ಬರಹಗಳ ಮೂಲಕ ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಬೆಳೆಸಿದರು. ಕನ್ನಡಿಗರ ವಿಭಜನೆಯಿಂದ ಉಂಟಾಗುತ್ತಿರುವ ಅನ್ಯಾಯಗಳನ್ನು ವಿವರಿಸಿ, ಏಕೀಕರಣದ ಅವಶ್ಯಕತೆಯನ್ನು ಸಮರ್ಥಿಸಿದರು. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ಕೇವಲ ಮಾಹಿತಿಯನ್ನು ನೀಡುವುದಲ್ಲದೆ, ಜನರಲ್ಲಿ ಚಿಂತನೆ ಮತ್ತು ಕ್ರಿಯಾಶೀಲತೆಯನ್ನು ಹುಟ್ಟು ಹಾಕುವ ಕೆಲಸವನ್ನೂ ಮಾಡುತ್ತಿದ್ದವು.[1]

ಏಕೀಕರಣ ಚಳುವಳಿಯ ಸಂದರ್ಭದಲ್ಲಿ ವಿವಿಧ ಕನ್ನಡ ಸಾಹಿತ್ಯ ಸಮ್ಮೇಳನಗಳು ಮತ್ತು ಸಾರ್ವಜನಿಕ ಸಭೆಗಳ ನಿರ್ಣಯಗಳನ್ನು ಪತ್ರಿಕೆಗಳು ವ್ಯಾಪಕವಾಗಿ ಪ್ರಸಾರ ಮಾಡುತ್ತಿದ್ದವು. ಇದರ ಮೂಲಕ ಚಳುವಳಿಯ ವಿಚಾರಗಳು ಗ್ರಾಮೀಣ ಪ್ರದೇಶಗಳಿಗೂ ತಲುಪಿದವು. ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಪತ್ರಿಭಟನೆಗಳು, ಸಭೆಗಳು, ಮನವಿಗಳು ಹಾಗೂ ಹೋರಾಟಗಳ ಸುದ್ದಿಗಳನ್ನು ಪ್ರಕಟಿಸುವ ಮೂಲಕ ಪತ್ರಿಕೆಗಳು ಕನ್ನಡಿಗರಲ್ಲಿ ಏಕತೆಯ ಭಾವನೆಯನ್ನು ಬಲಪಡಿಸಿದವು. ಒಂದು ಪ್ರದೇಶದ ಜನರು ಮತ್ತೊಂದು ಪ್ರದೇಶದ ಹೋರಾಟಗಳ ಬಗ್ಗೆ ತಿಳಿದುಕೊಳ್ಳಲು ಪತ್ರಿಕೆಗಳು ಪ್ರಮುಖ ಮಾಧ್ಯಮವಾಗಿದ್ದವು. ಪತ್ರಿಕೆಗಳು ಕೇವಲ ಸುದ್ದಿವಾಹಕಗಳಾಗಿರದೆ, ಚಳುವಳಿಯ ಸಕ್ರಿಯ ಭಾಗಿಗಳಾಗಿದ್ದವು. ಅನೇಕ ಪತ್ರಿಕೆಗಳು ಏಕೀಕರಣದ ಪರವಾಗಿ ಅಭಿಯಾನ ನಡೆಸಿ ಜನಾಭಿಪ್ರಾಯವನ್ನು ತಮ್ಮತ್ತ ಸೆಳೆಯುವಲ್ಲಿ ಯಶಸ್ವಿಯಾದವು. ಕೆಲವು ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿ ಕನ್ನಡ ನಾಡಿನ ಐತಿಹಾಸಿಕ ಹಿನ್ನೆಲೆ, ಭಾಷಾ ವೈಶೀಷ್ಟ್ಯತೆ ಹಾಗೂ ಸಾಂಸ್ಕೃತಿಕ ಏಕತೆಯನ್ನು ವಿವರಿಸಿದವು. ಇವು ಜನರಲ್ಲಿ ಕನ್ನಡ ನಾಡಿನ ಬಗ್ಗೆ ಹೆಮ್ಮೆ ಮತ್ತು ಆತ್ಮ ಗೌರವವನ್ನು ಮೂಡಿಸಿದವು. ಈ ಹಿನ್ನಲೆಯಲ್ಲಿ ಏಕೀಕರಣ ಚಳುವಳಿಯಲ್ಲಿ ಪ್ರಮುಖವಾದ ಪಾತ್ರವಹಿಸಿದ ಪತ್ರಿಕೆಗಳನ್ನು ಕುರಿತು ವಿವರಿಸಲಾಗಿದೆ.

[1] ಎ.ರಂಗಸ್ವಾಮಿ (ಸಂ) ಮತ್ತು ಡಾ.ಎಸ್.ಉಷಾರಾಣಿ (ಲೇಖಕರು), ಕನ್ನಡ ಪತ್ರಿಕೋದ್ಯಮ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, 2010, ಪು.4–5.

**ಮುಂಬೈ ಪ್ರಾಂತ್ಯದ ಪತ್ರಿಕೆಗಳ ಪಾತ್ರ**

ಕರ್ನಾಟಕದ ಬೆಳಗಾವಿ, ಧಾರವಾಡ, ಉತ್ತರಕನ್ನಡ ಮತ್ತು ವಿಜಯಪುರ ಜಿಲ್ಲೆಗಳನ್ನು ಒಳಗೊಂಡ ಈ ಪ್ರದೇಶವು ಉತ್ತರ ಕರ್ನಾಟಕದ ಭಾಗವಾಗಿದ್ದರೂ ಸಹ ಅವುಗಳು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಏಕೀಕರಣದ ಪೂರ್ವದಲ್ಲಿ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದರಿಂದ ಈ ಪ್ರದೇಶವನ್ನು ಮುಂಬೈ ಕರ್ನಾಟಕ ಎಂದು ಕರೆಯುತ್ತಾರೆ. ಹಳೆಯ ಮೈಸೂರು ಸಂಸ್ಥಾನವನ್ನು ಹೊರತು ಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಮಾತನಾಡುವ ಜನರು ನೆಲೆಸಿದ್ದ ಪ್ರದೇಶವೆಂದರೆ ಮುಂಬೈ ಕರ್ನಾಟಕವಾಗಿತ್ತು. ಈ ಮುಂಬೈ ಪ್ರಾಂತ್ಯದಲ್ಲಿ ಕನ್ನಡ ಚಳುವಳಿ ತೀವ್ರವಾಗಿತ್ತು. ಕನ್ನಡವನ್ನು ಉಳಿಸಿಕೊಳ್ಳುವುದಕ್ಕಾಗಿ ಅನೇಕ ಮಹನಿಯರು ಮತ್ತು ಸಂಘಟನೆಗಳು ಚಳುವಳಿಯನ್ನು ತೀವ್ರಗೊಳಿಸಿಕೊಂಡು ಬಂದಿದ್ದರು. ಅದಕ್ಕೆ ಪೂರಕವಾಗಿ ಈ ಮುಂಬೈ ಪ್ರಾಂತ್ಯದಲ್ಲಿ ಜನಿಸಿದ ಕನ್ನಡ ಪತ್ರಿಕೆಗಳು, ಕನ್ನಡ ಭಾಷೆ, ಸಂಸ್ಕೃತಿ ಉಳಿದು–ಬೆಳೆದು ಬರಲು ಅಪೂರ್ವ ಕಾಣಿಕೆ ನೀಡಿದವು.

ಮುಂಬೈ ಕರ್ನಾಟಕ ಭಾಗದ ಮೊಟ್ಟಮೊದಲ ಪತ್ರಿಕೆ "ಸುಬುದ್ಧಿ ಪ್ರಕಾಶ" 1849 ಸೆಪ್ಟೆಂಬರ್ ಒಂದನೇ ತಾರೀಖಿನಿಂದ ಬೆಳಗಾವಿ ನಗರದಲ್ಲಿ ಪ್ರಾರಂಭವಾಯಿತು. ನಾಲ್ಕು ಪುಟಗಳ ಕ್ರೌನ್ ಆಕಾರದ ಎಂಟನೇ ಒಂದು ಗಾತ್ರದಲ್ಲಿ ಅದನ್ನು ಪ್ರಕಟಿಸಲಾಗುತ್ತಿತ್ತು. ಪತ್ರಿಕೆಯ ಲೇಖನ, ವರದಿಗಳನ್ನು ಕೈಬರಹದಲ್ಲಿ ಬರೆದು ಕಲ್ಲಚ್ಚಿನ ಮೂಲಕ ಮುದ್ರಿಸಲಾಗುತ್ತಿತ್ತು. ಈ ಕಾರಣದಿಂದ ಅದು ಸೀಮಿತ ಪ್ರಸಾರ ಹೊಂದಿತ್ತು. ಈ ಭಾಗದ ಮೊದಲ ಸರ್ವಾಂಗ ಪೂರ್ಣ ಪತ್ರಿಕೆ "ಹಿತೇಚ್ಛು" ಎಂದು ಪರಿಗಣಿಸಲಾಗಿದೆ. ಹುಬ್ಬಳ್ಳಿಯ ಹತ್ತಿರವಿರುವ ಕಲಾದಗಿಯಲ್ಲಿ 1870ರಲ್ಲಿ ಈ ಪತ್ರಿಕೆ ಪ್ರಾರಂಭವಾಯಿತು. ಈ ಪತ್ರಿಕೆಗಳು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಕನ್ನಡ ನಾಡು, ಭಾಷೆ, ಸಂಸ್ಕೃತಿಯನ್ನು ಪ್ರಚಾರ ಮಾಡುತ್ತಿದ್ದವು. ಇದೇ ವೇಳೆಯಲ್ಲಿ ಧಾರವಾಡದಲ್ಲಿ ವಿಜಯ, ರಾಜಹಂಸ ಮತ್ತು ಕರ್ನಾಟಕ ಎಂಬ ಪತ್ರಿಕೆಗಳು ಪ್ರಾರಂಭಗೊಂಡವು. 1880ರ ವೇಳೆಗೆ ಬೆಳಗಾವಿಯಲ್ಲಿ ಇನ್ನೂ ಮೂರು ಪತ್ರಿಕೆಗಳು ಉದಯವಾದವು. ಈ ಎಲ್ಲಾ ಪತ್ರಿಕೆಗಳು ಕನ್ನಡ ಜನತೆಯ ಮೇಲೆ ಹಾಗೂ ಕನ್ನಡ ಭಾಷೆಯ ಮೇಲೆ ಮರಾಠಿಗರಿಂದ ಆಗುತ್ತಿದ್ದ ದಬ್ಬಾಳಿಕೆಯನ್ನು ತಡೆಯಲು ಮತ್ತು ಮರಾಠಿ ಭಾಷೆಯಿಂದ ಕನ್ನಡ ಭಾಷೆ ಮೇಲೆ ಉಂಟಾಗುತ್ತಿದ್ದ ಪ್ರಭಾವವನ್ನು ತಡೆಯಲು ನಿರಂತರ ಶ್ರಮಿಸಿದವು. ಅಂದು ಕನ್ನಡದ ಉಳಿವಿಗಾಗಿ ಸತತ ಹೋರಾಟ ನಡೆಸುವುದು ಕನ್ನಡ ಪತ್ರಿಕೆಗಳ ಪ್ರಮುಖ ಉದ್ದೇಶವಾಗಿತ್ತು.

ಕನ್ನಡ ಪತ್ರಿಕೆಗಳ ಉದಯಕಾಲದಲ್ಲಿ ಮುಂಬೈ ಕರ್ನಾಟಕದ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳು ತಮ್ಮ ಅಮೂಲ್ಯ ಕಾಣಿಕೆಯನ್ನು ನೀಡಿದವು. ಮುಂದಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಕನ್ನಡ ಪತ್ರಿಕೆಗಳು ತೀವ್ರವಾಗಿ ಬೆಳೆದವು. ಈ ಎಲ್ಲಾ ಪ್ರಾರಂಭಿಕ ಬೆಳವಣಿಗೆಗಳಿಂದಾಗಿ ಮುಂದೆ 1937ರಲ್ಲಿ "ಸಂಯುಕ್ತ ಕರ್ನಾಟಕ" ದಿನಪತ್ರಿಕೆ ಹುಬ್ಬಳ್ಳಿಯಲ್ಲಿ ಪ್ರರಂಭಗೊಂಡು ಕನ್ನಡ ಪತ್ರಿಕೋದ್ಯಮದಲ್ಲಿ ಇತಿಹಾಸವನ್ನು ನಿರ್ಮಾಣ ಮಾಡಿತು. ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದ ಮಹೋದೇಶಗಳನ್ನು ಹೊಂದಿದ್ದ ಸಂಯುಕ್ತ ಕರ್ನಾಟಕ ಬರುಬರುತ್ತ ಉತ್ತರ ಕರ್ನಾಟಕದ ಮನೆ ಮಾತಾಯಿತು. ಕಾಲಾಂತರದಲ್ಲಿ ಅದರ

ಬೆಂಗಳೂರು ಆವೃತ್ತಿ ಪ್ರಾರಂಭಗೊಂಡು ದಕ್ಷಿಣ ಕರ್ನಾಟಕದಲ್ಲೂ ಪ್ರಾಮುಖ್ಯತೆ ಪಡೆಯಿತು. ಇಂದಿಗೂ ಕೂಡ "ಸಂಯುಕ್ತ ಕರ್ನಾಟಕ" ಕನ್ನಡ ಜನತೆಯ ಪತ್ರಿಕೆಯಾಗಿ ಪ್ರಕಟಣೆ ಕಾಣುತ್ತಿದೆ.

**ಮದ್ರಾಸ್ ಪ್ರಾಂತ್ಯದ ಪತ್ರಿಕೆಗಳ ಪಾತ್ರ**

ಮದ್ರಾಸ್ ಕರ್ನಾಟಕದಲ್ಲಿ ಆರಂಭಿಕ ಪತ್ರಿಕೆಗಳು ಮುಖ್ಯವಾಗಿ ಮಿಷನರಿಗಳಿಂದ ಮತ್ತು ಸಮಾಜ ಸುಧಾರಕರಿಂದ ಪ್ರಕಟಿಸಲ್ಪಟ್ಟವು. ಇವು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದವು. ಕನ್ನಡ ಭಾಷೆಯಲ್ಲಿ 1843ರಲ್ಲಿ ಪ್ರಕಟವಾದ "ಮಂಗಳೂರು ಸಮಾಚಾರ" ಮೊದಲ ಪತ್ರಿಕೆಯಾಗಿದೆ. ಇದನ್ನು ಜರ್ಮನ್ ಮಿಷನರಿ "ಹರ್ಮನ್ ಫ್ರಿಡ್ರಿಚ್ ಮೋಗ್ಲಿಂಗ್" ಅವರು ಮಂಗಳೂರಿನಲ್ಲಿ ಪ್ರಕಟಿಸಿದರು. [2] ಇದು ಕನ್ನಡ ಪತ್ರಿಕೋದ್ಯಮದ ಇತಿಹಾಸದ ಮಹತ್ವದ ಮೈಲಿಗಲ್ಲಾಗಿ ಪರಿಗಣಿಸಿಲ್ಪಟ್ಟಿದೆ. ನಂತರ ಕನ್ನಡ ಭಾಷೆಯಲ್ಲಿ ಅನೇಕ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಪ್ರಕಟವಾಗ ತೊಡಗಿದವು. ಇವು ಕನ್ನಡ ಭಾಷೆಯ ಅಭಿವೃದ್ಧಿ, ಸಾಹಿತ್ಯದ ಪ್ರಚಾರ ಮತ್ತು ಜನಜಾಗೃತಿಗೆ ಮಹತ್ವದ ಕೊಡುಗೆ ನೀಡಿದವು. ಶಿಕ್ಷಣ, ಕೃಷಿ, ಆರೋಗ್ಯ, ಸಾಮಾಜಿಕ ಸುಧಾರಣೆ ಹಾಗೂ ರಾಜಕೀಯ ವಿಚಾರಗಳನ್ನು ಜನರಿಗೆ ತಲುಪಿಸುವಲ್ಲಿ ಪತ್ರೆಕೆಗಳು ಪ್ರಮುಖ ಮಾಧ್ಯಮಗಳಾದವು.

ಕ್ರೈಸ್ತ ಪಾದ್ರಿಗಳಿಗೆ ಸಾರಿಗೆ ಸಂಚಾರದಲ್ಲಿ ಈ ಪ್ರದೇಶ ಹೆಚ್ಚು ಅನುಕೂಲವಾಗಿತ್ತು. ಜೊತೆಗೆ ಇಲ್ಲಿ ಕನ್ನಡ ಮಾತನಾಡುವವರ ಸಂಖ್ಯೆಯೂ ಹೆಚ್ಚಾಗಿತ್ತು. ಅವರು ಪ್ರಾರಂಭಿಸಿದ ಪತ್ರಿಕೆ "ಕನ್ನಡ ಸಮಾಚಾರ, ಮಂಗಳೂರು ಸಮಾಚಾರ" ಈ ಭಾಗದಷ್ಟೆ ಅಲ್ಲ, ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳ ಮೊದಲ ಕನ್ನಡ ಪತ್ರಿಕೆಯಾಗಿವೆ. ಇವೆರಡೂ ಸಹ ವಾರ ಪತ್ರಿಕೆಗಳಾಗಿದ್ದವು. 1941ರವರೆಗೆ ಮಂಗಳೂರಿನಲ್ಲಿ ಕನ್ನಡ ದಿನ ಪತ್ರಿಕೆಗಳು ಪ್ರರಂಭವಾಗಲಿಲ್ಲ. ಕನ್ನಡದ ಮೊದಲ ಪತ್ರಿಕೆ ಜನ್ಮ ತಳೆದ ಒಂದನೂರು ವರ್ಷಗಳ ನಂತರ ಮಂಗಳೂರಿನಲ್ಲಿ ಪ್ರಥಮ ಕನ್ನಡ ದಿನಪತ್ರಿಕೆ ಆರಂಭಿಸಿದ್ದು ಅಲ್ಲಿಯ ಕೈಗಾರಿಕೋದ್ಯಮಿ "ವಿ.ಎಸ್.ಕುಡ್ವ" ಅವರ ಮಾಲಿಕತ್ವ ಹಾಗೂ ಸಂಪಾದಕತ್ವದಲ್ಲಿ "ನವಭಾರತ" ಪ್ರಾರಂಭವಾಯಿತು. ಪತ್ರಿಕಾ ಮಾಲೀಕರು ಖಾಸಗಿ ಸಾರಿಗೆ ಬಸ್ಸುಗಳನ್ನು ನಡೆಸುತ್ತಿದ್ದುರಿಂದ ಅವರ ಪತ್ರಿಕೆ ಜಿಲ್ಲೆಯ ಮೂಲೆ ಮೂಲೆಗೆ ಕೊಂಡೊಯ್ಯಲು ಸಹಾಯಕಾರಿಯಾಯಿತು. ಕ್ರಿ.ಶ.1849ರಲ್ಲಿ "ಸುಬುದ್ದಿ ಪ್ರಕಾಶ" 1857ರಲ್ಲಿ "ಕಂನಡ ಸುವಾರ್ತಕ"[3] ಎಂಬ ಪತ್ರಿಕೆಗಳು ಆರಂಭವಾದರೂ ಇವುಗಳು ಬಿಡಿಬಿಡಿಯಾದ ಪ್ರಯತ್ನಗಳಾಗಿದ್ದವೆಂದರೆ ತಪ್ಪಾಗಲಾರದು. ಆದರೆ 1860ರ ನಂತರ ನಿಯಮಿತವಾದ ರೀತಿಯಲ್ಲಿ ಪತ್ರಿಕೆಗಳ ಬೆಳವಣಿಗೆ ಆರಂಭವಾಯಿತು. ಇಲ್ಲೆಲ್ಲಾ ವಸಾಹತುಶಾಹಿ ವಿರುದ್ದದ ಹೋರಾಟ ಮತ್ತು ಕರ್ನಾಟಕದ ಏಕೀಕರಣದ ಉದ್ದೇಶಗಳೇ ಅಡಕವಾಗಿದ್ದುದನ್ನು ಕಾಣಬಹುದಾಗಿದೆ. ಅಂದಿನ ದಿನಗಳಲ್ಲಿ ಪತ್ರಿಕೆಗಳನ್ನು ನಡೆಸುವುದು ಸುಲಭವಾದ ಕೆಲಸವಾಗಿರಲಿಲ್ಲ. ಸರ್ಕಾರಗಳ ದೌರ್ಜನ್ಯ, ಹಣಕಾಸಿನ ಅಭಾವ ಒಂದು ಕಡೆಯಾದರೆ, ಅದು ಲಾಭಕ್ಕಾಗಿ ಮಾಡುತ್ತಿದ್ದ ಉದ್ಯಮವಾಗಿರಲಿಲ್ಲ. ಹಾಗಾಗಿ ಬಹು ಭಾಷೆಗಳಿಂದ ಕೂಡಿರುವ, ವಿವಿಧ

[2] ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟಸಂಖ್ಯೆ –500, 2000.

[3] ಸಂವಹನ ವಿಶೇಷ ಸಂಚಿಕೆ –2007, ಕರ್ನಾಟಕ ಮಾಧ್ಯಮ ಅಕಾಡಮಿ, ಪುಟಸಂಖ್ಯೆ–01.

ಪ್ರದೇಶಗಳಲ್ಲಿ ಹಂಚಿ ಹೋಗಿದ್ದ ಭಾರತೀಯರನ್ನು ನಿರ್ದಿಷ್ಟ ಉದ್ದೇಶದ ಈಡೇರಿಕೆಗಾಗಿ ಒಂದುಗೂಡಿಸುವಲ್ಲಿ ಪತ್ರಿಕಾರಂಗ ಯಶಸ್ಸಾಯಿತೆಂದರೆ ಅದು ಅತಿಶಯೋಕ್ತಿಯಲ್ಲ.[4]

**ಮೈಸೂರು ಸಂಸ್ಥಾನದಲ್ಲಿ ಪತ್ರಿಕೆಗಳ ಪಾತ್ರ**

ಕ್ರಿ.ಶ.1859ರಲ್ಲಿ ಮೈಸೂರಿನಲ್ಲಿ ಭಾಷ್ಯಂ ತಿರುಮಲಾಚಾರ್ಯ ಸಂಪಾದಕತ್ವದ ಮೈಸೂರು "ವೃತ್ತಾಂತ ಭೋದಿನಿ" ವಾರಪತ್ರಿಕೆ ಸರ್ಕಾರ ಮತ್ತು ಜನರ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಿತು. ಇದೇ ವೇಳೆ 1866ರಲ್ಲಿ ಮೈಸೂರು ಸರ್ಕಾರವೂ "ಮೈಸೂರು ಗೆಜೆಟ್" ಎಂಬ ಆಂಗ್ಲೋ–ಕನ್ನಡ ವಾರ ಪತ್ರಿಕೆಯನ್ನ ಪ್ರಕಟಿಸಿ ಅದರಲ್ಲಿ ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳಲ್ಲದೆ, ಸುದ್ದಿ, ಅಭಿಪ್ರಾಯ ಮತ್ತು ಸರ್ಕಾರಿ ಧೋರಣೆಗಳ ಬಗ್ಗೆ ಟೀಕೆಯನ್ನು ಪ್ರಕಟಿಸುತ್ತಿದ್ದರು. ಬಿ.ನರಸಿಂಗರಾವ್ ನೇತೃತ್ವದಲ್ಲಿ "ಸೂರ್ಯೋದಯ ಪ್ರಕಾಶಿಕ" ಎಂಬ ಕನ್ನಡ ಪ್ರಥಮ ದಿನಪತ್ರಿಕೆ 1888ರಲ್ಲಿ ಪ್ರಕಟವಾಯಿತು. 6 ತಿಂಗಳ ನಂತರ ಆರ್ಥಿಕ ಮುಗ್ಗಟ್ಟಿನಿಂದ ಈ ಪತ್ರಿಕೆ ವಾರಪತ್ರಿಕೆಯಾಗಿ ಮಾರ್ಪಟ್ಟಿತು.[5] 1883ರಲ್ಲಿ ಎಂ.ಎಸ್ ಪುಟ್ಟಣ ಹಾಗೂ ಎಂ.ವಿಶ್ರೀನಿವಾಸ್ ಅಯ್ಯಂಗಾರ್ ಅವರು ವಿದ್ಯಾರ್ಥಿಗಳ ಉಪಯೋಗಕ್ಕಾಗಿ "ಹಿತಬೋಧಿನಿ" ಎಂಬ ಕನ್ನಡ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಈ ಪತ್ರಿಕೆ ಶಿಕ್ಷಣ, ವಿಜ್ಞಾನ, ಮಾನವಿಕ ಶಾಸ್ತ್ರಗಳ ಬಗ್ಗೆ ಬೋದಪ್ರದವಾದ ಲೇಖನಗಳನ್ನು ಪ್ರಕಟಿಸುತ್ತಿತು.[6] ಇದಕ್ಕೂ ಮೊದಲು ವೆಂಕಟಕೃಷ್ಣಯ್ಯ ಅವರು 1885ರಲ್ಲಿ ಮೈಸೂರಿನಿಂದ ಪ್ರಕಟಿಸಿದ "ವೃತ್ತಾಂತ ಚಿಂತಾಮಣಿ", ಕನ್ನಡ ಖ್ಯಾತ ಪತ್ರಕರ್ತರಾದ ಡಿ.ವಿ.ಗುಂಡಪ್ಪರವರು 1907ರಲ್ಲಿ ಬೆಂಗಳೂರಿನಿಂದ ಆರಂಭಿಸಿದ ಕನ್ನಡ ದಿನಪತ್ರಿಕೆ "ಸಮಾಚಾರ ಸಂಗ್ರಹ", 1921ರಲ್ಲಿ ತಿರುಮಲ ತಾತಾಚಾರ್ಯರು ಪ್ರಕಟಿಸಿದ "ವಿಶ್ವಕರ್ನಾಟಕ" ಪತ್ರಿಕೆಗಳು ರಾಜ್ಯದಲ್ಲಿ ಜನತೆಯ ಮೇಲೆ ಗಾಢ ಪ್ರಭಾವವನ್ನ ಬೀರಿವೆ ಎಂಬುದರಲ್ಲಿ ಎರಡು ಮಾತಿಲ್ಲ. ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಮತ್ತು ಜನಹಿತಕ್ಕಾಗಿ ಹೋರಾಡಿದ ಪಿ.ಆರ್.ರಾಮಯ್ಯನವರು ಮೈಸೂರಿನಲ್ಲಿ 1976ರಲ್ಲಿ ಆರಂಭಿಸಿದ "ತಾಯಿನಾಡು", ಬಿ.ಎನ್.ಗುಪ್ತರ "ಪ್ರಜಾಮತ" ವಾರಪತ್ರಿಕೆ, 1934ರಲ್ಲಿ "ಜನವಾಣಿ" ದಿನಪತ್ರಿಕೆ ಸಾಮೂಹಿಕ ಚಳುವಳಿಗೆ ಬೆಂಬಲವಾಗುವ ಮೂಲಕ ಶಕ್ತಿಯುತ ಸಮೂಹ ಮಾಧ್ಯಮವಾಗಿ ಕೆಲಸ ಮಾಡಿದವು.

ಮೈಸೂರಿನ ಹಿರಿಯ ಪತ್ರಿಕೋದ್ಯಮಿ, ಸ್ವಾತಂತ್ರ್ಯ ಹೋರಾಟಗಾರ ಎಂ.ವೆಂಕಟಕೃಷ್ಣಯ್ಯನವರು ಕನ್ನಡ ಪತ್ರಿಕೋದ್ಯಮದ ಭೀಷ್ಮ ಎಂದು ಪ್ರಸಿದ್ಧರಾಗಿದ್ದಾರೆ. ಇವರು ಆಧುನಿಕ ಕನ್ನಡ ಪತ್ರಿಕೋದ್ಯಮಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ್ದರು. ಅದಕ್ಕೆ ಅವರನ್ನು ಕನ್ನಡ ಪತ್ರಿಕೋದ್ಯಮದ ಪಿತಾಮಹ ಎಂದು ಕರೆಯುತ್ತಾರೆ.[7] ಕನ್ನಡದ ಪ್ರಸಿದ್ಧ ದಿನಪತ್ರಿಕೆ "ತಾಯ್ನಾಡು" ಪಿ.ಆರ್.ರಾಮಯ್ಯನವರ ನೇತೃತ್ವದಲ್ಲಿ 1926ರಲ್ಲಿ ಪ್ರಾರಂಭವಾಯಿತು. "ದೇಶಬಂಧು" ಎಂಬ ದಿನಪತ್ರಿಕೆಯನ್ನು ಖ್ಯಾತ ಪತ್ರಕರ್ತ ಎನ್.ಎಸ್.ಸೀತಾರಾಮ್

---

[4] ಎಲ್.ಪಿ.ರಾಜು, ಸ್ವಾತಂತ್ರ್ಯ ಹೋರಾಟ ಮತ್ತು ಪತ್ರಿಕೋದ್ಯಮ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಪುಟಸಂಖ್ಯೆ –09

[5] ನಾಡಿಗ ಕೃಷ್ಣಮೂರ್ತಿಯವರ ಭಾರತೀಯ ಪ್ರತಿಕೋದ್ಯಮ ಪುಟ– 438, ಕರ್ನಾಟಕ ಮಾಧ್ಯಮ ಅಕಾಡೆಮಿಯ ಮರುಮುದ್ರಣ 2006.

[6] S.Sene "Modern Indian History" Pg.No.476.

[7] ಎಂ.ಪಿ.ಬಸವರಾಜು, 'ಆಧುನಿಕ ಮೈಸೂರು ಸಂಸ್ಥಾನದ ಸುಧಾರಣೆ.

ಶಾಸ್ತ್ರಿಯವರು ಬೆಂಗಳೂರಿನಿಂದ ವಾರ ಪತ್ರಿಕೆಯನ್ನು ಹೊರತಂದರು. ಎಂ. ಸೀತಾರಾಮ್ ಶಾಸ್ತ್ರೀ ಅವರು ಹೊರತಂದ "ವೀರಕೇಸರಿ" ಮತ್ತು ಸುಪ್ರಸಿದ್ಧ ಲೇಖಕ ತಿ.ತಾ ಶರ್ಮರವರ "ವಿಶ್ವ ಕರ್ನಾಟಕ", ಬಿ.ಎನ್ ಗುಪ್ತರವರ "ಪ್ರಜಾಮತ" ಕನ್ನಡದ ಪ್ರಸಿದ್ಧ ಪತ್ರಿಕೆಗಳಾಗಿದ್ದವು.

**ಕೊಡಗು ಪ್ರಾಂತ್ಯದಲ್ಲಿ ಪತ್ರಿಕೆಗಳ ಪಾತ್ರ**

ಕರ್ನಾಟಕದ ಏಕೀಕರಣಕ್ಕೆ ಮುಂಚೆ ಕೊಡಗು ಕಮೀಷನರ್ ಆಡಳಿತಕ್ಕೆ ಒಳಪಟ್ಟ ಪ್ರಾಂತ್ಯವಾಗಿತ್ತು. ದಟ್ಟವಾದ ನಿಸರ್ಗಸಂಪತ್ತಿನಿಂದ ಕೂಡಿದ ಈ ಜಿಲ್ಲೆಯಲ್ಲಿ ಜನ ಸಾಂದ್ರತೆ ಕಡಿಮೆ ಇದ್ದುದರಿಂದ ಪತ್ರಿಕೆಗಳ ಬೆಳವಣಿಗೆ ಅಷ್ಟಾಗಿ ಕಂಡುಬರಲಿಲ್ಲ. ಇಲ್ಲಿ ಪ್ರಾರಂಭವಾದ ಮೊದಲ ಪತ್ರಿಕೆಗಳೆಂದರೆ "ಕೊಡಗು ಮತ್ತು ಕೊಡಗು ವೃತ್ತಾಂತ", ಪಿ.ಡಿ. ಬೆಳ್ಳಿಯಪ್ಪ ಮತ್ತು ಸಿ.ಎಂ. ಪೂಣಚ್ಚ ಈ ಭಾಗದಲ್ಲಿ ಕನ್ನಡ ಪತ್ರಿಕೆಗಳು ಆರಂಭಿಸಿದ ಧೀಮಂತರು. ನಂತರದ ದಿನಗಳಲ್ಲಿ "ಶಕ್ತಿ" ಎನ್ನುವ ದಿನಪತ್ರಿಕೆ ಹಾಗೂ ಜನ್ಮಭೂಮಿ ಎಂಬ ವಾರಪತ್ರಿಕೆ ಪ್ರಾರಂಭಗೊಂಡವು.

**ಹೈದರಬಾದ್ ಕರ್ನಾಟಕದಲ್ಲಿ ಪತ್ರಿಕೆಗಳ ಪಾತ್ರ**

ಹೈದ್ರಾಬಾದಿನ ನಿಜಾಮರ ಸಂಸ್ಥಾನದ ಕನ್ನಡದ ಪ್ರದೇಶಗಳಲ್ಲಿ ಜನ್ಮ ತಳೆದ ಕನ್ನಡ ಪತ್ರಿಕೆಗಳ ಉದ್ದೇಶ ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದೊಂದಿಗೆ ಹೈದರಬಾದ ನಿಜಾಮನಿಂದ ವಿಮೋಚನೆ ಪಡೆಯುವುದಾಗಿತ್ತು. ಅಂದು ಕನ್ನಡ ಮಾತನಾಡುವ ಜಿಲ್ಲೆಗಳಾದ ಬೀದರ, ಕಲುಬುರಗಿ ಮತ್ತು ರಾಯಚೂರು, ಹೈದ್ರಾಬಾದ ನಿಜಾಮನ ಸಂಸ್ಥಾನಕ್ಕೆ ಸೇರಿದ್ದವು ಎಂಬ ಕಾರಣದಿಂದ ಇಲ್ಲಿ ಕನ್ನಡ ಪತ್ರಿಕೆಗಳು ಇರಲಿಲ್ಲ ಎನ್ನುವುದು ತಪ್ಪು ಗ್ರಹಿಕೆ. ಕನ್ನಡ ಬೆಳೆದು ಬಂದ ಬೇರೆ ಪ್ರದೇಶಗಳಿಗೆ ಹೋಲಿಸಿದ್ದಲ್ಲಿ ಈ ಪ್ರದೇಶದಲ್ಲಿ ವಿಳಂಬವಾಗಿ ಪತ್ರಿಕೋದ್ಯಮ ಆರಂಭಗೊಂಡಿರಬಹುದು. ಇಲ್ಲವೇ ಕಡಿಮೆ ಸಂಖ್ಯೆಯ ಪತ್ರಿಕೆಗಳು ಪ್ರಕಟಣೆಗೊಂಡಿರಬಹುದು. ಆದರೆ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ಹೈದ್ರಾಬಾದ ಕರ್ನಾಟಕ ಪ್ರದೇಶವು ತನ್ನ ಕಾಣಿಕೆಯನ್ನು ನೀಡಿ, ತನಗಿರುವ ಜವಬ್ದಾರಿಯನ್ನು ನಿಭಾಯಿಸಿರುವುದನ್ನು ಅಲ್ಲಗೆಳಿಯುವಂತಿಲ್ಲ.

ಕ್ರಿ.ಶ.1919–21ರ ಅವಧಿಯಲ್ಲಿ ಕೊಪ್ಪಳದಿಂದ ಪ್ರಕಟವಾದ "ಭಕ್ತ ಭಂಧು" ಎಂಬ ಮಾಸ ಪತ್ರಿಕೆಯನ್ನು ಹೈದ್ರಾಬಾದ್ ಕರ್ನಾಟಕದ ಮೊಟ್ಟಮೊದಲ ಕನ್ನಡ ಪತ್ರಿಕೆ ಎಂದು ಪರಿಗಣಿಸಲಾಗಿದೆ. ಇದು ಎಚ್.ಚಿದಂಬರಯ್ಯ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿತು. ಅವರು ಈ ಪತ್ರಿಕೆಯನ್ನು ಬೆಂಗಳೂರು ಮತ್ತು ದಾವಣಗೆರೆಯಿಂದಲೂ ಮುದ್ರಣ ಹಾಕಿಸಿ ಪ್ರಕಟಿಸುತ್ತಿದ್ದರು. "ಧರ್ಮ ಸಂಜೀವಿನಿ" ಪತ್ರಿಕೆ 1922ರಲ್ಲಿ ರಾಯಚೂರಿನಿಂದ ಪ್ರಕಟವಾಯಿತು. ಈ ಮಾಸಿಕ ಪತ್ರಿಕೆ ಮಸ್ಕಿ ಬಸವಪ್ಪ ಶ್ಯಾಸ್ತ್ರಿ ಮತ್ತು ನಾಯಕಲ್ ಬಸವರಾಜ ಶಾಸ್ತ್ರಿ ಇವರ ಉಭಯ ಸಂಪಾದಕತ್ವದಲ್ಲಿ ಪತ್ರಿಕೆ ಹೊರಬರುತ್ತಿತ್ತು. ಈ ಪತ್ರಿಕೆಯೂ ಮುದ್ರಣ ಸೌಕರ್ಯದ ಕೊರತೆಯಿಂದಾಗಿ ಬೆಂಗಳೂರಿನ ಟಿ.ಎನ್.ಚನ್ನಪ್ಪನವರ ಮಾಡೆಲ್ ಮುದ್ರಣಾಲಯದಲ್ಲಿ ಮುದ್ರಿಸಿ ರಾಯಚೂರಿನಲ್ಲಿ ಪ್ರಸಾರ ಮಾಡಲಾಗುತ್ತಿತ್ತು. 1926ರ ಜನವರಿಯಿಂದ ಪತ್ರಿಕೆ ಯಾದಗಿರಿ ಶ್ರೀ ಶಂಕರಾನಂದ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಣಗೊಳ್ಳತೊಡಗಿತ್ತು. ಹಣಕಾಸಿನ ಕೊರತೆಯಿಂದಾಗಿ ಹದಗೆಟ್ಟ ಆರ್ಥಿಕ ಸ್ಥಿತಿಯಿಂದ ಪತ್ರಿಕೆ ನಿಂತುಹೋಯಿತು. ವೀರಶೈವ ಧರ್ಮಕ್ಕೆ ಹೆಚ್ಚು ಪ್ರಚಾರ ಕೊಡುತ್ತಿದ್ದ "ಧರ್ಮ

ಸಂಜೀವಿನಿ" ವಚನ ಸಾಹಿತ್ಯವನ್ನು ಪ್ರಕಟಿಸುತ್ತಿತ್ತು. ಹೈದರಬಾದ್ ಭಾಗದಲ್ಲಿ ಧರ್ಮ ಪ್ರಚಾರದ ಪತ್ರಿಕೆಗಳ ಜೊತೆ ಅನೇಕ ಪತ್ರಿಕೆಗಳು ಸ್ವಾತಂತ್ರ್ಯದ ಹಂಬಲಕ್ಕಾಗಿ ಜನ್ಮತಾಳಿದ್ದವು. ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿ ಪತ್ರಿಕೆಗಳ ಸಂಖ್ಯೆ ಕರ್ನಾಟಕದ ಬೇರೆ ಪ್ರದೇಶಗಳಿಗೆ ಹೋಲಿಸಿದಲ್ಲಿ ಕಡಿಮೆ ಇದ್ದರೂ ಕೂಡ, ಅವು ದೇಶದ ಸ್ವಾತಂತ್ರಕ್ಕಾಗಿ, ರಾಜಕೀಯವಾಗಿ ಮತ್ತು ಗುಲಾಮಗಿರಿಯ ವಿರುದ್ಧ ಜನರನ್ನು ಎಚ್ಚರಿಸುವಲ್ಲಿ, ಸಂಘಟಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿವೆ. ಇತರ ಪ್ರದೇಶದ ಪತ್ರಿಕೆಗಳೊಂದಿಗೆ ಈ ಭಾಗದ ಎಲ್ಲಾ ಪತ್ರಿಕೆಗಳು ದೇಶದ ಸ್ವಾತಂತ್ರ್ಯಕ್ಕಾಗಿ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ನಿರಂತರ ದನಿ ಎತ್ತುವುದರೊಂದಿಗೆ, ಹೈದ್ರಾಬಾದ್ ಪ್ರಾಂತ್ಯ ವಿಮೋಚನಾ ಚಳುವಳಿಯಲ್ಲಿ ತಮಗಿದ್ದ ಅಧಿಕ ಜವಾಬ್ದಾರಿಯನ್ನು ನಿರ್ವಹಿಸಿದವು. ಹೀಗೆ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪತ್ರಿಕೆಗಳು ಹೇಗೆ ಪ್ರಮುಖ ಪಾತ್ರವನ್ನು ವಹಿಸಿದವು ಎಂಬುದನ್ನು ವಿವರಿಸಲಾಗಿದೆ.

**ಗ್ರಂಥ ಋಣ**


- ರಂಗಸ್ವಾಮಿ, ಎ. (ಸಂ.) ಮತ್ತು ಎಚ್.ಎಸ್. ಗೋಪಾಲರಾವ್(ಲೇಖಕರು). (2011). *ಕರ್ನಾಟಕ ಏಕೀಕರಣ.* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
- *ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು.* (1975). ಪ್ರಥಮ ಸಂಪುಟ, ಕನ್ನಡ(ಅನು) ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ.
- ಪ್ರೇಮಲತಾ ಸುಂದರೇಶನ್. (1944). *ಮೈಸೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು.* ಮೈಸೂರು ಜಿಲ್ಲಾ ಹಾಗೂ ನಗರ ಸ್ವಾತಂತ್ರ್ಯ ಹೋರಾಟ ಸಂಘ.
- ರಂಗಸ್ವಾಮಿ, ಎ. (ಸಂ.) ಮತ್ತು ಡಾ.ಎನ್.ಉಷಾರಾಣಿ (ಲೇಖಕರು). (2010). *ಕನ್ನಡ ಪತ್ರಿಕೋದ್ಯಮ.* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
- ಸೂರ್ಯನಾಥ ಕಾಮತ್. (1987). *ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪತ್ರಿಕೆಗಳ ಪಾತ್ರ.*
- ಸೀತಾರಾಮಶಾಸ್ತ್ರಿ. (1987). *ಕನ್ನಡ ಪತ್ರಿಕೋದ್ಯಮ–ಒಂದು ಪರಿಚಯ.*
- ನಾಡಿಗ್ ಕೃಷ್ಣಮೂರ್ತಿ. (1965). *ಭಾರತೀಯ ಪತ್ರಿಕೋದ್ಯಮ.*
- ಗುಂಡಪ್ಪ, ಡಿ.ವಿ. (1968). *ವೃತ್ತಪತ್ರಿಕೆ.* ಸಾಹಿತ್ಯ ಪ್ರಕಾಶನ.